# ಅತಿ ಆಸೆ ದುಃಖಕ್ಕೆ ಮೂಲ



ಒಂದು ಹಳ್ಳಿಯಲ್ಲಿ ಒಬ್ಬ ವ್ಯಕ್ತಿ ತನ್ನ ಹೆಂಡತಿ ಮತ್ತು ಮೂವರು ಸುಂದರವಾದ ಹೆಣ್ಣುಮಕ್ಕಳೊಂದಿಗೆ ವಾಸವಾಗಿದ್ದನು. ಅವನಿಗೆ ತನ್ನ ಮಕ್ಕಳ ಮೇಲೆ ಅಪಾರ ಪ್ರೀತಿ. ಕಷ್ಟಪಟ್ಟು ದುಡಿದು ತನ್ನ ಸಂಸಾರವನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದನು. ಹೀಗಿರುವಾಗ ಅವನು ಹಠಾತ್ತಾಗಿ ತೀರಿಕೊಂಡನು. ಅವನಿಲ್ಲದ ಸಂಸಾರ ದುಃಖದಲ್ಲಿ ಮುಳುಗಿತು. ಬ್ರಾಹ್ಮಣನ ಹೆಂಡತಿ ಯಶೋದೆ ದುಃಖದಿಂದ ಅಳುತ್ತ 'ಅಯ್ಯೋ ದೇವರೇ ನಾನು ಈಗ ಏನು ಮಾಡಲಿ? ನನ್ನ ಮಕ್ಕಳನ್ನು ಹೇಗೆ ಸಾಕಲಿ?'ಎಂದು ದೇವರಲ್ಲಿ ಮೊರೆ ಹೋದಳು.

ಹೀಗಿರುವಾಗ ಆ ವ್ಯಕ್ತಿ ಸುಂದರವಾದ ಹಂಸವಾಗಿ ಹುಟ್ಟಿದ. ಅದಕ್ಕೆ ತನ್ನ ಹೆಂಡತಿ ಮಕ್ಕಳ ನೆನಪಾಯಿತು. ಮನಸ್ಸಿನಲ್ಲಿ ದುಃಖಿಸುತ್ತಾ 'ನನ್ನ ಸಂಸಾರ ಹೇಗಿದೆಯೋ, ನಾನು ಅವರನ್ನು ಭೇಟಿಯಾಗಬೇಕು' ಎಂದು ಯೋಚಿಸಲಾರಂಭಿಸಿತು.

ಹಂಸ ತನ್ನ ಹೆಂಡತಿ ಮಕ್ಕಳನ್ನು ನೋಡಲು ಹಳ್ಳಿಗೆ ಹಾರಿ ಹೋಯಿತು. ಹಳ್ಳಿಯಲ್ಲಿ ತನ್ನ ಹೆಂಡತಿ ಮಕ್ಕಳು ಭಿಕ್ಷೆ ಬೇಡುತ್ತಿದ್ದುದ್ದನ್ನು ನೋಡಿ ತುಂಬಾ ದುಃಖಪಟ್ಟಿತು. ಆಗ ಏನಾದರೂ ಮಾಡಿ ಅವರಿಗೆ ಸಹಾಯ ಮಾಡಬೇಕೆಂದುಕೊಂಡಿತು. ಅವರು ಭಿಕ್ಷೆ ಬೇಡಬಾರದು ಎಂದುಕೊಂಡು ಹಂಸ ಯಶೋದೆಯ ಬಳಿ ಬಂದಿತು.

ಯಶೋದೆ ಸುಂದರವಾದ ಹಂಸವನ್ನು ನೋಡಿ ಅದನ್ನು ಹಿಡಿಯಲು ಹೋದಳು. ಆಗ ಹಂಸ 'ಯಶೋದೆ ಹೇಗಿದ್ದಿ? ನಾನು ನಿನ್ನ ಗಂಡ" ಎಂದಿತು. ಹಂಸ ತನ್ನ ರೆಕ್ಕೆಯಿಂದ ಒಂದು ಪುಕ್ಕವನ್ನು ತೆಗೆದು ಯಶೋದೆಗೆ ಕೊಟ್ಟಿತು. 'ಇದನ್ನು ಮಾರಿ ಊಟ, ಬಟ್ಟೆಗಳನ್ನು ತೆಗೆದುಕೊ' ಎಂದು ಹೇಳಿ ಅಲ್ಲಿಂದ ಹಾರಿ ಹೋಯಿತು.

ಹೀಗೆಯೇ ಪ್ರತಿ ವಾರವೂ ಬಂದು ಯಶೋದೆಗೆ ಒಂದೊಂದು ರೆಕ್ಕೆಯನ್ನು ತೆಗೆದುಕೊಡುತ್ತಿತ್ತು. ಸ್ವಲ್ಪ ಸಮಯದ ನಂತರ ಯಶೋದೆ ಮತ್ತು ಮಕ್ಕಳು ಶ್ರೀಮಂತರಾದರು. ಯಾವ ಯೋಚನೆಯಿಲ್ಲದೆ ದಿನ ಕಳೆಯುತ್ತಿದ್ದರು.

ಹೀಗಿರುವಾಗ ಅವಳಿಗೆ ಇನ್ನೂ ಶ್ರೀಮಂತಳಾಗಬೇಕೆಂಬ ಅಸೆಯಾಯಿತು. ವಾರಕ್ಕೆ ಒಂದೇ ಪುಕ್ಕವನ್ನು ತೆಗೆದುಕೊಳ್ಳುವ ಬದಲು ಹಂಸದಿಂದ ಅಷ್ಟೂ ಪುಕ್ಕವನ್ನು ತೆಗೆದುಕೊಂಡರೆ ಇನ್ನೂ ಶ್ರೀಮಂತರಾಗ ಬಹುದು ಎಂದು ಯೋಚನೆ ಮಾಡಿದಳು. ಹೀಗಿರುವಾಗ ಹಂಸ ದಿನದಂತೆ ಅವಳ ಬಳಿಗೆ ಬಂದಿತು. ಹಂಸದ ಎಲ್ಲಾ ಪುಕ್ಕವನ್ನು ತೆಗೆದುಕೊಳ್ಳಲು ಯಶೋದೆ ಹಂಸದ ಬಳಿ ಹೋದಳು. ಹಂಸ ಎಷ್ಟೇ ಕೇಳಿಕೊಂಡರೂ ಅವಳು ಬಿಡಲಿಲ್ಲ. ಅವಳು ಹಂಸದ ಎಲ್ಲಾ ಪುಕ್ಕವನ್ನು ತೆಗೆದುಕೊಂಡಳು.

ಹಂಸ  ಬೇಸರದಿಂದ 'ಯಶೋದೆ, ನೀನು ಏನು ಮಾಡಿದೆ ಎಂಬುದು ಗೊತ್ತೇ? ನೀನಿಗ ಕಿತ್ತುಕೊಂಡ ಪುಕ್ಕದಿಂದ ಏನೂ ಉಪಯೋಗವಿಲ್ಲ. ಬಲವಂತವಾಗಿ ಕಿತ್ತುಕೊಂಡಿದ್ದರಿಂದ ಅವು ಸಾಮಾನ್ಯವಾದ ಪುಕ್ಕಗಳಾಗಿವೆ'ಎಂದು ಹೇಳಿತು.

ಆಗ ಯಶೋದೆ, 'ಅಯ್ಯೋ ನನ್ನಿಂದ ತಪ್ಪಾಗಿ ಹೋಯಿತು. ನಾನೀಗ ಏನು ಮಾಡಲಿ?' ಎಂದು ಅಳತೊಡಗಿದಳು. ಅದಕ್ಕೆ ಹಂಸ 'ಅತಿ ಆಸೆ ಪಟ್ಟರೆ ಹೀಗೇ ಅಗುವುದು.  ನಿನ್ನ ಅತಿ ಆಸೆಯಿಂದ ನಿನಗೆ ಏನೂ ಸಿಗಲಿಲ್ಲ' ಎಂದು ಹೇಳಿ ಹಾರಿ ಹೋಯಿತು. ಮುಂದೆಂದೂ ಹಂಸ ಅವಳ ಬಳಿಗೆ ಬರಲಿಲ್ಲ.

**–ವೇದಾವತಿ ಹೆಚ್.ಎಸ್.**